ಹಂಬಲವೂ, ಮನಸ್ಸಿನ ಆರ್ದ್ರತೆಯೂ ಇದ್ದಾಗಲೂ ಅಕ್ಕಯ್ ಆತ್ಮಗೌರವವನ್ನು ಮಾತ್ರ ಕಳೆದು ಬದುಕುವುದಿಲ್ಲ ಎನ್ನುವುದೇ ಆಕೆಯ ಬಗೆಗಿನ ನಮ್ಮ ಗೌರವವನ್ನು ನಿರಂತರವಾಗಿ ಹೆಚ್ಚಿಸುತ್ತಾ ಹೋಗುತ್ತದೆ. ವಾಸು ಆಕೆಯನ್ನು ಆರ್ಥಿಕವಾಗಿ ಶೋಷಿಸಿದ್ದನ್ನೂ ಒಂದುಮಟ್ಟದಲ್ಲಿ ಸಹಿಸಿಕೊಂಡ ಈಕೆ, ದತ್ತು ಮಗುವಿನ ವಿಷಯದಲ್ಲಿನ ಈತನ ನಡವಳಿಕೆಯನ್ನು ಧಿಕ್ಕರಿಸಿ ಅದರಿಂದ ಹೊರ ಬರುತ್ತಾರೆ. ಆಕೆಯ ಮದುವೆಯ ನೋಂದಣಿ ಮಾಡಿಸಿದ್ದ ವಕೀಲೆಯೇ ಆಕೆಯ ವಿಚ್ಛೇದನಕ್ಕೂ ವಕೀಲೆಯಾಗಬೇಕಾಗುವ ದುರಂತವನ್ನು ಓದುವಾಗ ವಿಷಾದವಾಗುತ್ತದೆ. ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ತನ್ನ ಹೋರಾಟದ ಹೆಜ್ಜೆಗುರುತುಗಳನ್ನು ಊರಿರುವ ಅಕ್ಕಯ್ ಅಂಥವರ ಪಾಡೇ ಹೀಗಿರಬೇಕಾದರೆ, ಮಿಕ್ಕವರ ಸ್ಥಿತಿ ಏನಾಗಿರಬಹುದು? ಸಂಸ್ಥೆಯೊಂದರಲ್ಲಿ ಅಕ್ಕಯ್ ಕೆಲಸ ಮಾಡುತ್ತಿರುವಾಗ, ಇಂಥ ವಾಸ್ತವದಲ್ಲಿರುವ ಮನುಷ್ಯರು ಸಹಜವಗಿಯೇ ಅಗ್ರೆಸಿವ್ ಆಗಿರುವಂತೆ ಈಕೆಯೂ ಮುನ್ನುಗ್ಗುವ ಧಾಡಸೀ ಸ್ವಭಾವದವರಾಗಿರುತ್ತಾರೆ. ಅಲ್ಲಿ ತಾನು ಬೆಳೆಯಲು ಅವಕಾಶ ಸಿಗುತ್ತಿಲ್ಲ ಎಂದಾದಾಗ ಅದನ್ನು ವಿರೋಧಿಸುವ ಈಕೆಗೆ ಎದುರಾಗುವ ವ್ಯಂಗ್ಯದ ಉದ್ಗಾರವೆಂದರೆ, 'ಇನ್ನೇನು ನಿನಗೆ ನನ್ನ ಜಾಗ ಬಿಟ್ಟುಕೊಡಬೇಕಾ' ಎನ್ನುವುದು. ಹೌದು, ನಾನೇ ನಿರ್ದೇಶಕಳಾಗಬೇಕು, ಬಿಟ್ಟುಕೊಡಿ ನಿಮ್ಮ ಜಾಗವನ್ನು ಎನ್ನುವ ಅಕ್ಕಯ್ ಉತ್ತರ ಅದೆಂಥ ಸಮಾಧಾನವನ್ನು ಕೊಡುತ್ತದೆ!

ಕಾನೂನಿನ ಬಗ್ಗೆ, ಅದರ ಸೀಮಿತ ಶಕ್ತಿಯ ಬಗೆಗೆ ನಾವು ಸಿನಿಕರಾಗಿ ಮಾತನಾಡುವುದೇ ಹೆಚ್ಚು. ಆದರೆ, ಅಕ್ಕಯ್‌ಗೆ ಮಾತ್ರ ಇದು ಅಸೀಮ ಶಕ್ತಿಯನ್ನು ತುಂಬುತ್ತದೆ. ಇವರ ಪರವಾದ ಕಾನೂನು ಪಾಸಾದ ದಿನ ತಾನು ಅದೆಷ್ಟು ಆತ್ಮವಿಶ್ವಾಸದಿಂದ ತಾಯಿಮನೆಗೆ ಹೋದೆ ಎನ್ನುವುದನ್ನು ಇವರು ದಾಖಲಿಸುವುದನ್ನು ನೋಡಿದಾಗ, ಇದು ಕಾನೂನೂ ಒಳಗೊಳ್ಳಬೇಕಾದ ಸಾಂಘಿಕ ಪ್ರಯತ್ನ ಎನ್ನುವ ಸತ್ಯವೂ ಕಣ್ಣೆದುರಿಗೆ ಬರುತ್ತದೆ. ಸದಾ ದೂರುತ್ತಿದ್ದ, ದ್ವೇಷಿಸುತ್ತಿದ್ದ ತಂದೆ, ಈಕೆಯನ್ನು ಕಾರಿನಲ್ಲಿ ಮನೆಗೆ ವಾಪಸ್ ಬಿಡಲು ಬರುವ, ಬಿಡುವ ಘಳಿಗೆಯಲ್ಲಿ ಬೇಡ, ಮನೆಗೇ ಬಂದು ಬಿಡು ಎನ್ನುವ ದೃಶ್ಯವೊಂದು ಓದುಗರ ಮನಸ್ಸಿನಲ್ಲಿ ಸದಾ ಉಳಿಯುತ್ತದೆ. ಕರುಳಬಳ್ಳಿಯ ಸಂಬಂಧ ಎನ್ನುವ ನಂಬಿಕೆಗೆ ಆಧಾರವಾಗಿ, ಮನುಷ್ಯರ ಮನಸ್ಸಿನಲ್ಲಿ ಇದ್ದೇ ಇರುವ ದಯಾಮೃತದ ಪುರಾವೆಯಾಗಿಬಿಡುತ್ತದೆ ಆ ಸಂದರ್ಭ. ರಾಜ್ಯೋತ್ಸವ ಪ್ರಶಸ್ತಿಯ ಹಣದ ಬಹುಪಾಲನ್ನು ತನ್ನ ಜೊತೆಗಾರರಿಗಾಗಿ ಖರ್ಚು ಮಾಡುವ ಮಂಜಮ್ಮನ ನಡವಳಿಕೆಯೂ ಇಷ್ಟೇ ಗೌರವವನ್ನು ನಮ್ಮಿಂದ ಪಡೆಯುತ್ತದೆ.

ನಮ್ಮೊಡನಿದ್ದೂ ನಮ್ಮಂತಾಗದ, ನಮ್ಮಂತಾಗಲು ನಾವು ಬಿಡದ ಕಟು ವಾಸ್ತವವನ್ನು ಇವು ಹೇಳುತ್ತಿವೆ ಎನ್ನುವುದು ಒಂದು ಆಯಾಮವಾದರೆ, ಇದನ್ನೂ ಮೀರಿದ ಇನ್ನೊಂದು ಆಯಾಮ ಈ ಕೃತಿಗಳಿಗಿದೆ. ಬದುಕಿನ ಎಂಥ ಸಂಕಟವೂ, ಸಂಕಷ್ಟವೂ ಇವರನ್ನು ಬಾಗಿಸಿ ಕುಗ್ಗಿಸುವುದಿಲ್ಲ. ಸೆಟೆದೇ ಬದುಕುತ್ತಿರುವ ಇವರು ಬಾಗಿ ಬಳುಕುವುದು ಪ್ರೀತಿಗೆ ಮಾತ್ರ.

ಇವರಿಬ್ಬರ ಆತ್ಮಕಥನಗಳನ್ನೂ ನಿರೂಪಿಸಿರುವುದು ಇಬ್ಬರು ಪುರುಷರು ಎನ್ನುವುದರ ಕಾಕತಾಳೀಯತೆ ಏನೇ ಇರಲಿ, ಇದು ಮಂಜಮ್ಮ ಮತ್ತು ಅಕ್ಕಯ್ ಹೋರಾಟದ ನೈತಿಕ ಗೆಲುವಿನಂತೆ ನನಗೆ ಕಾಣಿಸುತ್ತದೆ. ಈ ಹೋರಾಟವು ಮುನ್ನಡೆಯಬೇಕಾಗಿರುವ ದಾರಿಯ ಮುನ್ಸೂಚನೆಯಾಗಿಯೂ ನನಗೆ ಕಾಣಿಸುತ್ತದೆ. ಅತ್ಯಂತ ಸಹಜವಾದ ಭಾಷೆ ಮತ್ತು ಶೈಲಿಯಲ್ಲಿ ಇದನ್ನು ಕಟ್ಟಿಕೊಟ್ಟಿರುವ ಅರುಣ್, ಮತ್ತು ತಮ್ಮ ಎಂದಿನ ಪೆಡಸು ಭಾಷೆಯನ್ನು ಬಿಟ್ಟುಕೊಡಲು ಇನ್ನಿಲ್ಲದಂತೆ ಪ್ರಯತ್ನಿಸಿ ಗೆದ್ದಿರುವ ಡೊಮಿನಿಕ್ ಇಬ್ಬರೂ ನಮ್ಮ ಗೌರವಕ್ಕೆ ಮತ್ತು ಕೃತಜ್ಞತೆಗೆ ಪಾತ್ರರು. ಪ್ರಕಾಶಕರಿಗೂ ನಮ್ಮ ವಿಶೇಷ ಮನ್ನಣೆಗಳು ಸಲ್ಲಬೇಕು.